ಮಿಥುನ ಶಿಲ್ಪಲೋಕದ ಖಜುರಾಹೋ ಪ್ರವಾಸಕ್ಕೆ ಕರೆಯುತ್ತಾರೆ. ರಮಾ ಅಲ್ಲಿಗೆ ಹೋದರೋ ಇಲ್ಲವೋ ತಿಳಿಯದು. ಖಜುರಾಹೋ, ಕೊಣಾರ್ಕಗಳ ಮಿಥುನ ಶಿಲ್ಪ ಲೋಹಿಯಾರನ್ನು ಆವರಿಸಿಕೊಳ್ಳುತ್ತದೆ:

'ಇಂಡಿಯಾದ ಶಿಲ್ಪಿಗಳೂ, ಸಂತರೂ ಸೌಂದರ್ಯವೆನ್ನುವುದು ಲೈಂಗಿಕತೆಗೆ ಸಂಬಂಧವುಳ್ಳದ್ದು ಎಂಬುದನ್ನು ಅರಿತಿದ್ದರು; ಗಂಡಸಿನ ದೃಷ್ಟಿಗಂತೂ ಈ ಭೂಮಿಯಲ್ಲಿ ಅತ್ಯಂತ ಸುಂದರವಾದದ್ದೆಂದರೆ ಸ್ತ್ರೀ ದೇಹವೇ ಎಂಬುದನ್ನೂ ಚೆನ್ನಾಗಿ ತಿಳಿದಿದ್ದರು. ಬೇರೆ ಬೇರೆ ಕಡೆಗಳಲ್ಲಿನ ವಿಧವಿಧವಾದ ಆಲಿಂಗನ ಭಂಗಿಗಳಲ್ಲಿ ದೇಹದ ಬಾಗು ಬಳುಕುಗಳು ಆಗಲೇ ಚಿತ್ರಿತವಾಗಿದ್ದರೂ ಖಜುರಾಹೊ ಮತ್ತು ಕೊಣಾರ್ಕದ ರತಿಕ್ರೀಡೆಗಳಲ್ಲಿ ಸ್ತ್ರೀ ದೇಹಕ್ಕೆ ಸಾಧ್ಯವಾಗಬಹುದಾದ ಸಮಸ್ತ ಭಂಗಿಗಳೂ, ಸಮಸ್ತ ಅಂಗೋದ್ರೇಕಗಳೂ ಮೈದಾಳಿಬಿಟ್ಟಿವೆ. ಇದು ಸೌಂದರ್ಯದ ಆತ್ಯಂತಿಕ ಅನ್ವೇಷಣೆಯೇ ಇದ್ದೀತು... ಹೆಣ್ಣು ದೇಹದ ಸೌಂದರ್ಯದ ಪಾರಮ್ಯವನ್ನು ತೋರಿಸುವುದರಲ್ಲಿ ಖಜುರಾಹೋನಂಥದು ಜಗತ್ತಿನಲ್ಲಿ ಮತ್ತೊಂದಿಲ್ಲ!'

ಅಷ್ಟೊತ್ತಿಗಾಗಲೇ ವೈದ್ಯರು ಲೋಹಿಯಾಗೆ ಹೃದಯದ ಆರೋಗ್ಯ ಕುರಿತು ಎಚ್ಚರಿಕೆ ಕೊಟ್ಟಿದ್ದರು. ವೈದ್ಯರ ಸೂಚನೆಯನ್ನೂ ಮೀರಿ ತಾನು ಪಾವಟಿಗೆಗಳ ಮೇಲೆ ಹತ್ತಿ ಈ ಶಿಲ್ಪಗಳನ್ನು ಪರೀಕ್ಷಿಸಿದ ರೀತಿಯನ್ನು ತುಂಟ ಲೋಹಿಯಾ ದಾಖಲಿಸುತ್ತಾರೆ:

'ಕೊಣಾರ್ಕದ ಆ ಹಾಡುಗಾರ್ತಿಯರ ಕಣ್ಣು ತುಟಿಗಳ ಮೇಲೆ, ದೇಹದ ಬಾಗುಗಳ ಮೇಲೆ ಮೆಲುವಾಗಿ ಕೈಯಾಡಿಸಿ ಅವೆಲ್ಲ ಕಲ್ಲಲ್ಲಿ ಘನಗಟ್ಟಿದ ಯಾವುದೋ ದಿವ್ಯ–ಕಂಪಿತ–ಗಾತ್ರಗಳೇ ಸರಿ ಎಂದು ನಿಶ್ಚಯ ಮಾಡಿಕೊಂಡೆ!'

ಇವನ್ನೆಲ್ಲ ನೆನೆಯುತ್ತಾ ಬರೆಯುತ್ತಿರುವಾಗ, ಹಿಂದೊಮ್ಮೆ ಗೋಡೆಯೊಂದರ ಮೇಲೆ ತೂಗುಬಿಟ್ಟಿದ್ದ ಹೆಣ್ಣಿನ ಚಿತ್ರವೊಂದು ಲೋಹಿಯಾ ಕಣ್ಣೆದುರು ಮೂಡುತ್ತದೆ. ಒಮ್ಮೆ ಲೋಹಿಯಾ ಎಲ್ಲೂ ಹೋಗಲಾಗದೆ ಕೋಣೆಯೊಂದರಲ್ಲೇ ಅಜ್ಞಾತವಾಗಿದ್ದಾಗ 'ಖಚಿತವಾದ ಬೆತ್ತಲೆಗೆರೆಗಳಲ್ಲಿ ಚಿತ್ರಿಸಿದ, ಸ್ನಾನ ಮಾಡಿ ಬರುತ್ತಿರುವ ಹೆಣ್ಣೊಬ್ಬಳ ಚಿತ್ರ' ತಮ್ಮನ್ನು ವಿಚಲಿತಗೊಳಿಸಿದ್ದು ನೆನಪಾಗುತ್ತದೆ!

ಎಲ್ಲೂ ಮನೆಯಿಲ್ಲದ ಜೋಗಿ ಲೋಹಿಯಾರ ಪ್ರವಾಸ ಸರಳವಾಗಿತ್ತು. ಎರಡು ಜೊತೆ ಖಾದಿ ಬಟ್ಟೆ; ಎಲ್ಲಿ ಬೇಕಾದರೂ ಹಾಸಬಹುದಾದ ತೆಳು ಹಾಸಿಗೆ; ಎರಡು ದಿನಕ್ಕೊಮ್ಮೆ ಶೇವ್ ಮಾಡಿಕೊಳ್ಳಲು ಶೇವಿಂಗ್ ಸೆಟ್, ಪುಸ್ತಕಗಳು. ಲೋಹಿಯಾ ಕಲಾಪ್ರವಾಸಗಳು ಸಮಾಜವಾದಿ ಕ್ಯಾಂಪುಗಳು, ರಾಜಕೀಯ ಸಭೆಗಳ ಆಸುಪಾಸಿನಲ್ಲಿ ಕೂಡ ನಡೆಯುತ್ತಿದ್ದವು.

ಇಂಥದೊಂದು ಮೈಸೂರು ರಾಜ್ಯದ ಪ್ರವಾಸದಲ್ಲಿ ಗೊಮ್ಮಟನ ಮೂರ್ತಿ ಲೋಹಿಯಾರನ್ನು ಸೆಳೆಯಿತು:

'ಮಹಾವೀರನ ಧರ್ಮಪರಂಪರೆಯಲ್ಲಿ ಬಂದ ಮಹಾತ್ಮನೊಬ್ಬನ ಮಹತ್ ಪ್ರತಿಮೆಯೊಂದು ಶ್ರವಣಬೆಳಗೊಳದಲ್ಲಿ ನಿಂತಿದೆ. ಇದು ಜಗತ್ತಿನಲ್ಲೇ ಅತ್ಯಂತ ಬೃಹದಾಕಾರದ ಏಕಶಿಲಾಪ್ರತಿಮೆ. ಗೆದ್ದೂ ಸಂಯಮದ ಬಿಗುಪು ಕಳಚದೆ ನಿಂತಿರುವ ಈ ಮೂರ್ತಿ ಆಶ್ಚರ್ಯಮೂಕವಾಗಿಸುತ್ತದೆ; ಭಯ ಹುಟ್ಟಿಸುತ್ತದೆ. ತನ್ನನ್ನು ತಾನು ಸಂಪೂರ್ಣ ಗೆದ್ದು ಕೊನೆತನಕ ನಿಲ್ಲುವುದು ಅಸಾಧ್ಯ ಎಂಬುದನ್ನೇ ಅದು ಸಾರುತ್ತಿದೆಯೇನೋ ಎನ್ನಿಸುತ್ತದೆ.'

***

ಇಂಥ ಪ್ರವಾಸಗಳಿಗಾಗಿ ಲೋಹಿಯಾ ಅಪಾರ ಬೌದ್ಧಿಕ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಇಂಥ ಸಿದ್ಧತೆಯೊಂದಿಗೆ ಒಮ್ಮೆ ಗ್ರೀಸ್ ದೇಶದ ಚಾರಿತ್ರಿಕ ನಗರ ಅಥೆನ್ಸ್‌ಗೆ ಹೊರಟಿದ್ದರು; ಪಯಣ ರದ್ದಾಗಿಬಿಟ್ಟಿತು:

'ಯಾವ ವಿಧಿಯೋ ನನ್ನನ್ನು ಅಥೆನ್ಸ್‌ನಿಂದ ದೂರವಿಟ್ಟುಬಿಟ್ಟಿದೆ. ವಾಯುಪ್ರಯಾಣಗಳು ರದ್ದಾಗಿಬಿಟ್ಟವು. ನಾನೇನೋ ಕನಿಷ್ಠ ಅಥೆನ್ಸನ್ನು ಸಂದರ್ಶಿಸುವ ಯೋಗ್ಯತೆಯಾದರೂ ಬಂತು ಎನ್ನುವಷ್ಟು ಗ್ರೀಕ್ ಕಥಾಸಂಸ್ಕೃತಿಗಳಲ್ಲಿ ಅಧ್ಯಯನ ಮಾಡಿಕೊಂಡಿದ್ದೆ. ಆದರೆ ಆ ವಿಧಿಗೆ ಈ ಯೋಗ್ಯತೆ ಸಾಲದೆನ್ನಿಸಿತೋ ಏನೋ, ತಳ್ಳಿಹಾಕಿಬಿಟ್ಟಿದೆ.'

1961ರಲ್ಲಿ ಲೋಹಿಯಾಗೆ ಅಥೆನ್ಸ್‌ನ ಸ್ಟಡಿ ಗ್ರೂಪೊಂದರ ಸಭೆಗೆ ಹೋಗುವ ಆಹ್ವಾನ ಬಂತು; ಗ್ರೀಕ್ ಸಂಸ್ಕೃತಿ ದರ್ಶನದ ಕನಸು ಕೈಗೂಡಿತು. ಇಂಗ್ಲೆಂಡಿನಲ್ಲಿದ್ದ ರಮಾಗೆ ಬರೆಯುತ್ತಾರೆ: 'ಅಥೆನ್ಸ್ ಅಥವಾ ವಿಯೆನ್‌ಗೆ ಬಾ. ವಿಯೆನ್ ಬಿಟ್ಟರೆ ಇನ್ನೆಲ್ಲಿಗೂ ಹೋಗಲು ನನ್ನಲ್ಲಿ ಹಣವೂ ಇಲ್ಲ, ಸಮಯವೂ ಇಲ್ಲ... ಬಟ್ಟೆಗಳೂ ಇಲ್ಲ, ಪಾಸ್‌ಪೋರ್ಟೂ ಇಲ್ಲ. ಎಲ್ಲವೂ ಮಸುಕಾಗಿದೆ; ಆದರೂ ಏನೋ ಒಂದು ಆಗಬಹುದು.'

ಎಷ್ಟೋ ಸಲ ಕಲಾಕೃತಿಗಳಲ್ಲಿ, ಕಲ್ಲಿನಲ್ಲಿ ಅರ್ಥಗಳನ್ನು ಹುಡುಕುತ್ತಾ, ಅದರಲ್ಲೂ ಅವಶೇಷಗಳ ಪಿಸುದನಿಗಳನ್ನು ಕೇಳಿಸಿಕೊಳ್ಳುತ್ತಾ, ಲೋಹಿಯಾಗೆ ಈ ಜಾಗಗಳಿಂದ ಕದಲಲು ಮನಸ್ಸೇ ಬರುತ್ತಿರಲಿಲ್ಲ! ಅಂಥದೊಂದು ವಿದಾಯದ ಮಧುರ ಯಾತನೆಯ ಗಳಿಗೆ:

'ಅವಶೇಷ ಮಾತ್ರವಾದ ಯಾವುದೊಂದು ದೇವಾಲಯವನ್ನು ನೋಡಿ ಹೊರಟ ಮೇಲೆ ಕೂಡ ನಾನು ಎಷ್ಟೋ ಸಲ, ಎಳೆಯ ತರುಣನೊಬ್ಬ ತಾನು ಅಗಲಬೇಕಾದ ತನ್ನ ಪ್ರೇಯಸಿಯ ಕಡೆ ತಿರುತಿರುಗಿ ಕಣ್ಣು ಹಾಯಿಸುವ ಹಾಗೆ ದೂರದಿಂದಾದರೂ ತಿರುತಿರುಗಿ ಮರ, ಕೊಂಬೆಗಳ ನಡುವೆ ಕಾಣುವ ಆ ದೇವಾಲಯದ ಶಿಖರದ ಕಡೆ ಆಸೆಯಿಂದ ಕಣ್ಣು ಹಾಯಿಸಿದ್ದುಂಟು!'

ಹೀಗೇ ಲೋಹಿಯಾ ಒಮ್ಮೆ ಪ್ರವಾಸ ಮಾಡುತ್ತಿದ್ದಾಗ ದಾರಿಹೋಕನೊಬ್ಬ 'ನೀವು ಯಾವ ನದಿಯವರು?' ಎಂದು ಕೇಳುತ್ತಾನೆ. 'ನೀವು ಯಾವ ಕಡೆಯವರು?' ಎಂಬ ಅರ್ಥದ ಈ ಪ್ರಶ್ನೆಯಿಂದ ಚಕಿತರಾಗುತ್ತಾರೆ. ಇಂಡಿಯಾದ 'ನದಿಸಂಸ್ಕೃತಿ'ಯನ್ನು ಕುರಿತು ಯೋಚಿಸುತ್ತಾ ನದಿಗಳು ವಿವಿಧ ನಾಡುಗಳನ್ನು ಕೂಡಿಸುವ ರೀತಿಗೆ ವಿಸ್ಮಯಗೊಳ್ಳುತ್ತಾರೆ.

***

ಲೋಹಿಯಾ ಸಂಸ್ಕೃತಿ ಕಥನದಲ್ಲಿ ಇತಿಹಾಸದ ಕಲ್ಲು, ಶಿಲ್ಪ ಎಲ್ಲವೂ ಜೀವಂತ; ಬುದ್ಧ, ಏಸು, ದ್ರೌಪದಿ, ಸಾವಿತ್ರಿ, ಪ್ರಹ್ಲಾದ, ರಾಮ, ಕೃಷ್ಣ, ಶಿವ ಎಲ್ಲರೂ ಸಮಕಾಲೀನರು! ಇದು ಲೋಹಿಯಾರೊಳಗಿದ್ದ ಒಬ್ಬ 'ಸಾಂಸ್ಕೃತಿಕ ಕಾದಂಬರಿಕಾರ'ನ ನೋಟದ ಫಲವೂ ಆಗಿತ್ತು. ಲೋಹಿಯಾಗೆ 'ಪುರಾಣವೆಂಬುದು ತುದಿಯೇ ಇಲ್ಲವೇನೋ ಎನ್ನುವಂಥ ಕಾದಂಬರಿ'ಯಂತೆ ಕಾಣುತ್ತಿತ್ತು:

'ಪುರಾಣ ಚಕಚಕಿಸುವ ಅಸಂಖ್ಯ ಕಥೆಗಳನ್ನು ಖಚಿತಗೊಳಿಸಿ ಕಟ್ಟಿದ್ದು. ಪುರಾಣವು ಉಪದೇಶಿಸಿದರೆ ಅಥವಾ ರಂಜಿಸಿದರೆ ಅದರ ಒಂದು ಭಾಗವಾಗಿ, ಅಷ್ಟೆ. ಹೆಚ್ಚಾಗಿ ಅದು ಸೂರ್ಯನ ಹಾಗೆ, ಬೆಟ್ಟಗಳ ಹಾಗೆ, ಫಲವೃಕ್ಷಗಳ ಹಾಗೆ ನಮ್ಮ ಬದುಕಿನ ದೊಡ್ಡ ಭಾಗವೇ. ಮಾವು ಹಲಸುಗಳು ನಮ್ಮ ದೇಹಧಾತುವೇ ಆಗುತ್ತವೆ; ನಮ್ಮ ರಕ್ತಮಾಂಸಗಳಲ್ಲೆ ಬೆರೆತುಕೊಳ್ಳುತ್ತವೆ. ಪುರಾಣ ಯಾವುದೇ ಜನಾಂಗದ ದೇಹಧಾತುವಿನ ಭಾಗ...'

ಮನೋವಿಜ್ಞಾನಿ ಕಾರ್ಲ್ ಯೂಂಗ್ 'ಪುರಾಣಗಳು ಸಮಷ್ಟಿಯ ಅಪ್ರಜ್ಞೆಯ ಅಭಿವ್ಯಕ್ತಿ' ಎನ್ನುತ್ತಾನೆ. ಲೋಹಿಯಾ ಅದಕ್ಕಿಂತ ಕೊಂಚ ಮುಂದೆ ಸಾಗುತ್ತಾರೆ:

'ಯಾವುದೇ ಜನರ ಪುರಾಣ ಕತೆಗಳು ಅವರ ಕನಸು ಮತ್ತು ಕೋಟಲೆಗಳ ದಾಖಲೆಗಳಾಗಿರುತ್ತವೆ. ಅವರು ಅತ್ಯಮೂಲ್ಯವೆಂದು ತಿಳಿದ ಆಸೆಗಳು, ಹಂಬಲಗಳು ಮಾತ್ರವಲ್ಲದೆ, ಬದುಕಿನ ಸರಕಾಗಿರುವ, ಬದುಕಿನ ಸ್ಥಳಿಕ ಹಾಗೂ ಲೌಕಿಕ ಇತಿಹಾಸದ ಸರಕಾಗಿರುವ, ವಿಮೋಚನೆಯೇ ಇಲ್ಲದ ವಿಷಾದ... ಇವುಗಳ ಅಳಿಸಲಾಗದಂಥ ದಾಖಲೆಗಳು– ರಾಮ, ಕೃಷ್ಣ, ಶಿವ. ಇವು ಇಂಡಿಯಾದ ಮಹತ್ ಸ್ವಪ್ನಗಳು, ಮಹತ್ ದುಃಖಗಳು.'

ರಾಮ, ಕೃಷ್ಣ, ಶಿವರ ವ್ಯಕ್ತಿತ್ವಗಳನ್ನು ಲೋಹಿಯಾ ತಾತ್ವಿಕವಾಗಿ ಹಿಡಿದಿಟ್ಟಿದ್ದಾರೆ: ರಾಮ, 'ಸೀಮಾರೇಖೆಯೊಳಗೇ ಚಲಿಸುತ್ತಿದ್ದ ವ್ಯಕ್ತಿತ್ವ'. ಕೃಷ್ಣ, 'ಸಮೃದ್ಧ ವ್ಯಕ್ತಿತ್ವ'. ಶಿವ, 'ಗಾತ್ರಾತೀತ ವ್ಯಕ್ತಿತ್ವ.'

'ರಾಮನದ್ದು ಸೀಮಾರೇಖೆಯೊಳಗಿನ ವ್ಯಕ್ತಿತ್ವದಲ್ಲಿ ಪೂರ್ಣತೆ; ಕೃಷ್ಣನದ್ದು ಸಮೃದ್ಧ ವ್ಯಕ್ತಿತ್ವದಲ್ಲಿ ಪೂರ್ಣತೆ; ಶಿವನದಾದರೋ ಉದ್ದಗಲ, ಎತ್ತರಗಳ ಗಾತ್ರಕಲ್ಪನೆಗೆ ಸಂಬಂಧವೇ ಇಲ್ಲದ, ಗಾತ್ರದ ಮಾನಕ್ಕೆ ಸಿಲುಕದ–ವ್ಯಕ್ತಿತ್ವದಲ್ಲಿ ಪೂರ್ಣತೆ' ಎಂದು ಲೋಹಿಯಾ ಬರೆಯುತ್ತಾರೆ: 'ಈ ವ್ಯಕ್ತಿತ್ವಗಳಲ್ಲಿ ಒಂದೊಂದೂ ಪೂರ್ಣವಾದ್ದೇ. ಇವುಗಳಲ್ಲಿ ಒಂದು ಇನ್ನೊಂದಕ್ಕಿಂತ ಹೆಚ್ಚು ಅಥವಾ ಕಮ್ಮಿ ಎಂಬ ಪ್ರಶ್ನೆಯೇ ಇಲ್ಲ. ಸೀಮಾರೇಖೆಯೊಳಗಣ ವ್ಯಕ್ತಿತ್ವ, ಸಮೃದ್ಧ ವ್ಯಕ್ತಿತ್ವ, ಗಾತ್ರಾತೀತ ವ್ಯಕ್ತಿತ್ವ – ಇವೆಲ್ಲ ಒಬ್ಬನಲ್ಲೇ ಒಗ್ಗೂಡಿ ಸಂಭವಿಸಬಹುದು. ವಾಸ್ತವವಾಗಿ, ಇಂಡಿಯಾದ ಮಹಾಮಹಾ ಸಂತರುಗಳೆಲ್ಲ ಅಂಥ ಸಮರಸದ ಸಂಭವಕ್ಕೇ ಪ್ರಯತ್ನಪಟ್ಟಿದ್ದಾರೆ.'

ಲೋಹಿಯಾ ಆಸ್ತಿಕರಲ್ಲ. ಆದರೆ ರಾಮ ಕೃಷ್ಣ ಶಿವರಂಥ ವ್ಯಕ್ತಿತ್ವಗಳನ್ನು ಆಳವಾಗಿ ನಂಬುವ, ಒಪ್ಪುವ ಜನರಿರುವ ಸಂಸ್ಕೃತಿಯಲ್ಲಿ ಹಲವು ಶತಮಾನಗಳು ವಿಕಾಸಗೊಂಡಿರುವ